**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 100/2018.**

**ಸಿ.ಡಬ್ಲ್ಯೂಃ–12 ಪಿ.ಡಬ್ಲ್ಯೂಃ–8**

**ದಿಃ 05.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ತಾಯಪ್ಪಾ ಬೀರಪ್ಪಾ ನಸಲಾಪೂರೆ |
| ವಯಸ್ಸು | : | 80 ವರ್ಷ. |
| ಉದ್ಯೋಗ | : | ಏನೂ ಇಲ್ಲ. |
| ವಾಸಸ್ಥಳ | : | ಜೋಡಕುರಳಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.1 ನನ್ನ ಪಾವನ್ಯಾ. ಆತನ ಮನೆಯವರು ಗೊತ್ತು.

2) ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತು.

3) ಈಗ್ಗೆ 10 ವರ್ಷಗಳ ಹಿಂದೆ ಚಾ.ಸಾ.1 ಹಾಗೂ ಆರೋಪಿತರ ಮನೆ ಮುಂದೆ ಹೊಲದ ಸಲುವಾಗಿ ಬಡಿದಾಡಿದ್ದಾರೆ. ಕಲ್ಲು ಮತ್ತು ಬಡಿಗೆಗಳಿಂದ ನನ್ನ ಮಾವನ್ಯಾರಿಗೆ ಬಡಿದಿದ್ದಾರೆ. ನಾನು ಹೊಲದಲ್ಲಿದ್ದೆ. ನಾನು ಬರುವಷ್ಟರಲ್ಲಿ ಅವರು ಬಡಿಸಿಕೊಂಡು ಬಿದ್ದಿದ್ದರು. ಪೋಲಿಸರು ಬಂದು ಬರೆದುಕೊಂಡು ಹೋದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ನಮ್ಮ ಪಾವನ್ಯಾ ಸಿದ್ದಪ್ಪಾ ಹಾಗೂ ಆರೋಪಿತರಿಗೆ ಬಹಳ ವರ್ಷಗಳಿಂದ ಹೊಲದ ವಿಚಾರವಾಗಿ ಜಗಳ ಇತ್ತು ಎಂದರೆ ಸರಿ.

2) ದಿನಾಂಕಃ 20.04.2014 ರಂದು ಸಂಜೆ 05.00 ಗಂಟೆ ಸುಮಾರಿಗೆ ಚಾ.ಸಾ.1 ಸಿದ್ದಪ್ಪಾನ ಪಾಲಿಗೆ ಬಂದ ಜಮೀನದಲ್ಲಿ ಗಳೆ ಹೊಡೆಯುತ್ತಿದ್ದಾಗ 3ನೇ ಆರೋಪಿ ಬಂದು ಗಳೆ ಹೊಡೆಯಬೇಡಿರಿ ಅಂತಾ ತಕರಾರು ಮಾಡಿದ ಎಂದರೆ ಸರಿ. ಆ ಕಾಲಕ್ಕೆ ಚಾ.ಸಾ.1 ನನ್ನನ್ನು ಹಾಗೂ ಚಾ.ಸಾ.13 ರವರನ್ನು ಕರೆಸಿ ಬುದ್ದಿವಾದ ಹೇಳಿಸಿದ ಎಂದರೆ ಸರಿ. ಆಗ ನಮ್ಮ ಮಾತು ಕೇಳದೇ ಆರೋಪಿತರು ಕೈಯಲ್ಲಿ ಬಡಿಗೆಗಳನ್ನು ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದು ಏಕೆ ಗಳೆ ಹೊಡೆಯುತ್ತಿದ್ದೀರಿ ಸೂಳೆಮಕ್ಕಳಾ , ಬೋಸಡಿಮಕ್ಕಳಾ ಅಂತಾ ಅವಾಚ್ಯವಾಗಿ ಬೈದರು ಎಂದರೆ ಸರಿಯಲ್ಲ. ನಂತರ ನನಗೀಗ ತೋರಿಸಿದ ಮು.ಮಾ.1 ರಿಂದ 15 ಬಡಿಗೆಗಳಿಂದ ಅವರಿಗೆ ಹೊಡೆದರು ಹಾಗೂ ನನಗೀಗ ತೋರಿಸಿದ ಮು.ಮಾ.16 ರಿಂದ 19 ಕಲ್ಲುಗಳಿಂದ ಅವರು ಕೆಳಗೆ ಬಿದ್ದ ಮೇಲೆ ಅವರ ಮೇಲೆ ಎಸೆದರು ಎಂದರೆ ಸರಿಯಲ್ಲ. ಆಗ ಅಂಬ್ಯುಲೆನ್ಸನಲ್ಲಿ ಗಾಯಾಳುಗಳನ್ನು ಚಿಕ್ಕೋಡಿ ಆಸ್ಪತ್ರೆಗೆ ದಾಖಲಿಸಿದೇವು

ಎಂದರೆ ಸರಿ. ನಂತರ ಚರಾಟೆ ಆಸ್ಪತ್ರೆಯಲ್ಲಿ ಉಪಚಾರಗೊಂಡರು ಎಂದರೆ ಸರಿ. ಮಾರನೇ ದಿನ ಪೋಲಿಸರಿಗೆ ನಾನೇ ಆರೋಪಿತರು ಬಡಿದ ಜಾಗೆ ತೋರಿಸಿದೆ ಎಂದರೆ ಸರಿ. ಅದೇ ಕಾಲಕ್ಕೆ ನನಗೀಗ ತೋರಿಸಿದ ಮು.ಮಾ.1 ರಿಂದ 19 ಜಪ್ತು ಮಾಡಿಕೊಂಡರು ಎಂದರೆ ಸರಿ. ಸದರಿ ವಿಚಾರವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ-** 2, 4, 7, 9, 11 **ರಿಂದ 14 ಮತ್ತು 16 ನೇ ಆರೋಪಿತರ ಪರಃಶ್ರೀ ಎಸ.ಎಸ.ಡಿ.ವಕೀಲರಿಂದ** :

1) ನನಗೆ ಸರಿಯಾಗಿ ಕಣ್ಣು ಕಾಣುವುದಿಲ್ಲ ಎಂದರೆ ಸರಿ. ಸಿದ್ದಪ್ಪಾ ಹಾಗೂ ಆರೋಪಿತರ ಮದ್ಯೆ ಜಮೀನು ಸಲುವಾಗಿ ವ್ಯಾಜ್ಯ ಇದ್ದು ಅದರಲ್ಲಿ ಅಪಸಾತಿಯಾಗಿ ಅವರವರ ಪಾಲಿನಲ್ಲಿ ಅವರವರು ಸಾಗು ಮಾಡುತ್ತಿದ್ದಾರೆ ಎಂದರೆ ಸರಿ.

2) ಸಿದ್ದಪ್ಪಾ ಮತ್ತು ಅವರ ಮನೆಯವರು ಆರೋಪಿತರ ಖೊಟ್ಟಿ ಸಹಿ ಮಾಡಿ ಬ್ಯಾಂಕಿನಿಂದ ಸಾಲ ಪಡೆದಿದ್ದರು ಹಾಗೂ ಜೈಲಗೆ ಹೋಗಿದ್ದರು ಎಂದರೆ ಸರಿ. ಆ ರೀತಿ ಜೈಲಿನಲ್ಲಿ ಬಂದು ಬಿದ್ದ ಮೇಲೆ ಚಾ.ಸಾ.8 ಮಹಾದೇವಿ ಕಡೆಯಿಂದ ಜಾತಿನಿಂದನೆ ಪ್ರಕರಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ಆರೋಪಿತರನ್ನು ಖುಲಾಸೆ ಮಾಡಲಾಗಿದೆ ಎಂದರೆ ಸರಿ.

3) ಜಗಳ ಆದ ಬಗ್ಗೆ ಸಿದ್ದಪ್ಪ ನನ್ನ ತೋಟಕ್ಕೆ ಬಂದು ಹೇಳಿದ್ದರಿಂದ ಗೊತ್ತಾಯಿತು. ನಾನು ಜಾಗಾಕ್ಕೆ ಬರುವ ಮುಂಚೆ ಜಗಳ ಆಗಿತ್ತು. ಆರೋಪಿತರು ಬೈಯುವದನ್ನು, ಹೊಡೆಯುವುದನ್ನು ನಾನು ಕಣ್ಣಾರೆ ನೋಡಿಲ್ಲ, ಯಾವುದೇ ಜಗಳ ಬಿಡಿಸಿಲ್ಲ ಎಂದರೆ ಸರಿ.

4) ನಾನು ಯಾವುದೇ ಜಾಗಕ್ಕೆ ಹೋಗಿಲ್ಲ, ಪೋಲಿಸರಿಗೆ ಬಡಿಗೆ ಮತ್ತು ಕಲ್ಲು ತೋರಿಸಿಲ್ಲ ಎಂದರೆ ಸರಿ. ಮು.ಮಾ.1 ರಿಂದ 19 ನೇದ್ದವುಗಳನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಸಿದ್ದಪ್ಪಾ ನನ್ನ ಪಾವನ್ಯಾ ಆಗಿದ್ದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.